ನೋಟಿಸ.

ಕೋಲಾರ ಕುಭಕಾರ್ಯನಿಧಿ ಲಿಮಿಟೆಡ್ ಆಫಿಸಿನಿಂದ.

ತಾರೀಖು 5ನೇ ಮೇ 1889.

ಈ ಕಂಪೆನಿಗೆ ಸೇರಿದ ವಿಷಯ ಷೇರು ಹೋಲ್ಡರಗಳಿಗೂ ಪ್ರಸಿದ್ಧವಾಗಿ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಾಗುವ ಪಾಯಂಟುಗಳನ್ನ ಚರ್ಚೆಯಿಂದ ಸಭೆಸೇರಿ ವಿಾಟಿಂಗ್ ಮಾಡಲು ಈ ತಿಂಗಳು 19ನೇ ತಾರೀಖು ಭಾನುವಾರ ಪ್ರಾತಃಕಾಲ 7 ಘಂಟೆಗೆ ಸರಿಯಾಗಿ ಬ್ಯಾಂಕು ಆಫಿಸಿಗೆ ದಯವಾಡಿಸಬೇಕೆಂದು ಇದರಿಂದ ಕೋರಲ್ಪಟ್ಟು ಯಿದೆ.

1. ಬಾಲೋದಯದಲ್ಲಿ ಈಗ ಯಿರುವ ವಾಯಿದೆ ಬದಲಾಯಿಸತಕ್ಕ ಮತ್ತು ಸಹಾಯ ಕಮ್ಮಿ ಜಾಸ್ತೀ ಮಾಡತಕ್ಕ ವಿಷಯ.
2. ಹಾಲಿ ಅಪ್ಕೇರ್ದಾರ್ರಿಗೆ ಒಂದು ಷೇರಿನ ಪ್ರಕಾರ ಸಹಾಯ ಸಲ್ಲುತ್ತಾ ಯಿರುವದನ್ನ ಬದಲಾಯಿಸಿ ಚರ್ಚೆಯಿಂದ ತಕ್ಕ ಯೇರ್ಪಾಟು ಮಾಡತಕ್ಕ ವಿಷಯ, ಮತ್ತು ಬ್ರಾಂಚ್ ಏಜಂಟರು ಚೆನಾಯಿಸಿದವರಿಗೆ ಸಹಾಯ ಕೊಡತಕ್ಕ ವಿಷಯ.
3. ಹಾಲಿ ಜಾರಿಯಲ್ಲಿರುವ ಸಹಾಯದ ಮೊಬಲಗಿನ ಕಮ್ಮಿ ಜಾಸ್ತೀ ವಿಷಯ.
4. ಷೇರು ವರ್ಗವಾದವರಿಂದ ಫೀ ವಸೂಲ್ಮಾಡತಕ್ಕ ವಿಷಯ ಮತ್ತು ಅದಕ್ಕಾಗಿ ಇರುವ ವಾಯಿದೆ ಬದಲಾಯಿಸತಕ್ಕ ವಿಷಯ.
5. ವ್ಯಾಟೀರ್ಷ ಮಾಡತಕ್ಕ ವಿಷಯ.
6. ಸಹಾಯಪಡಿಯತಕ್ಕ ಷೇರುದಾರ್ರಿಂದ ಪರಮನೆಂಟ್ ಫೀ ವಸೂಲ್ಮಾಡತಕ್ಕ ವಿಷಯ.
7. ರೆಜಿಸ್ಟ್ರಾಗಿರುವ ಷೇರುಗಳ ವೈಕಿ ಕೆಲವು ಭಾಗ ಹೊಸಡಿವಿರ್ಜ ಆಗಿ ಯೇರ್ಪಡಿಸಿ ಸಹಾಯ ಕೊಡತಕ್ಕ ವಿಷಯ.
8. ಹೊಸಡಿವಿರ್ಜ ಯೇರ್ಪಡಿಸುವದರಲ್ಲಿ ನಾಮಿನಿಗೆ ಷೇರುಗಳು ತೆಗದುಕೊಳ್ಳತಕ್ಕ ವಿಷಯ.
9. ನೋಟಿಸ್ ಜಾರೀ ಕ್ರಮ.
10. ಕಾಲ್ಸು ವಸೂಲಿ ವಿಷಯ.
11. ಸ್ಥಾವರ ಸ್ವತ್ತು ಆಧಾರದ ಮೇಲೆ ಲೇವಾದೇವಿ ಮಾಡತಕ್ಕ ವಿಷಯ.
12. ಮೂಬದಲೇ ಮೂಲಕ ಲೇವಾದೇವಿ ವಿಷಯ.
13. ಡೈರೆಕ್ಟರುಗಳ ಬೈಲಾ ವಿಷಯ.

ಬೈ ಆರ್ಡರ್,
ಕೀಲ್ಕೋಟೇ ಸುಬ್ಬರಾವ್, ಏಜಂಟ್.

ಗವರ್ಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥ ವಾಗಿ ಗವರ್ಮೆಂಟ್ ಆಫಿಸರಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಪೌಂಡಗಳು ತೆಗದುಕೊಳ್ಳುವ ಯಾವ ಮನುಷ್ಯ ನಾದರೂ ಕಲ್ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರ್ಟಿಂಡೆಂಟರ ದೆಸೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಒಂದಕ್ಕೆ ರೂ. 3—14—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 7—4—0; ಒಂದು ಪೌಂ ಔಷಧವುಳ್ಳ ಡಬ್ಬಿಗೆ ರೂ. 14—0—0; ಬೊಟಾನಿಕಲ್ ಗಾರ್ಡನ್ ಸೂಪರ್ಟಿಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸ ಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿಬಂದಕ್ಕೆ ರೂ. 4—14—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 9—4—0, ಒಂದು ಪೌಂವುಳ್ಳ ಡಬ್ಬಿಗೆ 17 ರೂ. 8ಆಣೆ; ಈ ಔಷಧವು ಕಲ್ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯರ್ ವ ನೇಟೀವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ಔನ್ಸ್ ತಗರದಡಬ್ಬಿಗೆ 4 ಆಣೆಯೂ 8 ಔನ್ಸ್ ತಗರದ ಡಬ್ಬಿಗೆ 8 ಆಣೆ ಟಪ್ಪಾಲ್ ಹಾಸಲೂ, ಒಂದು ಪೌಂ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.

Mysore Govt Central Press, Bangalore—1889.